ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ವಿಶ್ವಜಿತ್ ಶೆಟ್ಟಿ

ವಿಭಾಗೀಯ ವ್ಯವಸ್ಥಾಪಕರು, ಯುನೈಟೆಡ್ ಇಂಡಿಯ ಇನ್ಸುರೆನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಶ್ರೀಮತಿ ರೇಷಮಾ ಮತ್ತು ಇತರರು*

ಸಂಕೀರ್ಣ ಪ್ರಥಮ ಮೇಲ್ಮನವಿಸಂಖ್ಯೆ: 101647/2019 ಇದರೊಂದಿಗೆ ಇತರೆ, ದಿನಾಂಕ 30 ನೇ ಸೆಪ್ಟೆಂಬರ್, 2020.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್. ವಿಶ್ವಜಿತ್ ಶೆಟ್ಟಿ:

X ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು ಮತ್ತು ಸದಸ್ಯರು, ಹೆಚ್ಚುವರಿ ಎಮ್.ಎ.ಸಿ.ಟಿ., ಬೆಳಗಾವಿ ಇವರು ಎಮ್.ವಿ.ಸಿ.ಸಂಖ್ಯೆ: 1932/2017 ರಲ್ಲಿ ವಿಭಾಗೀಯ ವ್ಯವಸ್ಥಾಪಕರು, ಯುನೈಟೆಡ್ ಇಂಡಿಯ ಇನ್ಸುರೆನ್ಸ್ ಕಂಪನಿ ಅ., -ವಿರುದ್ಧ-ಶ್ರೀಮತಿ ರೇಷಮಾ ಮತ್ತು ಇತರರು ನೀಡಿದ ದಿನಾಂಕ: 03.01.2018 ರ ತೀರ್ಪು ಮತ್ತು ಐತೀರ್ಪುಗಳಿಂದ ಈ ಎರಡು ಮೇಲ್ಮನವಿಗಳು ಉದ್ಭವಿಸಿವೆ.

2. ಹೊಣೆಗಾರಿಕೆ ಮತ್ತು ಪರಿಹಾರದ ಪ್ರಮಾಣವನ್ನು ಪ್ರಶ್ನಿಸಿ ಅಪಘಾತಕ್ಕೀಡಾದ ವಾಹನದ ವಿಮಾದಾರರು ಎಮ್.ಎಫ್.ಎ.ಸಂಖ್ಯೆ: 101647/2019 ನ್ನು ಸಲ್ಲಿಸಿದ್ದರೆ, 1 ರಿಂದ 4 ರವರೆಗಿನ ಕ್ಲೇಮುದಾರರು ಎಂದರೆ ಮೃತನ ಪತ್ನಿ ಮತ್ತು ಮಕ್ಕಳು ನ್ಯಾಯಾಧಿಕರಣವು ನೀಡಿದ ಪರಿಹಾರದ ಹೆಚ್ಚಳವನ್ನು ಕೋರಿ ಎಮ್.ಎಫ್.ಎ.ಸಂಖ್ಯೆ: 102819/2019 ನ್ನು ಸಲ್ಲಿಸಿದ್ದಾರೆ.

3. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳೆಂದರೆ-ದಿನಾಂಕ:15.03.2017 ರಂದು, ರಮೇಶ್ ಸುತಾರ್ ಎಂಬಾತನು ನೋಂದಣಿಸಂಖ್ಯೆ: ಎಮ್ಹೆಚ್ -12/ಬಿಇ -971 ನ್ನು ಹೊಂದಿರುವ ತನ್ನ ಮೋಟಾರ್ಸೈಕಲ್ಲನ್ನು ಅಲೆಘಾಟಾ ಕಡೆಯಿಂದ ಕಲ್ಯಾಣದ ಕಡೆಗೆ ಚಲಾಯಿಸುತ್ತಿದ್ದನು ಮತ್ತು ಆತನು ಗಣೇಶ್ ಫ್ಯಾಬ್ರಿಕೇಷನ್ ಗ್ಯಾರೇಜ್ ಹತ್ತಿರ ತಲುಪಿದಾಗ, ಗಣೇಶ್ ಉಮಜಿ ಗವಾರಿ ಎಂಬಾತನು ನೋಂದಣಿ ಸ ಂ ಖ್ಯೆ:ಎಮ್ಹೆಚ್ -14/ಇವಿ -3432 ನ್ನು ಹೊಂದಿರುವ ಮತ್ತೊಂದು ಮೋಟಾರ್ಸೈಕಲ್ಲನ್ನು ರಭಸವಾಗಿ ಮತ್ತು ನಿರ್ಲಕ್ಷ್ಯದಿಂದ ಚಲಾಯಿಸುತ್ತಾ ಬಂದು, ರಮೇಶನ ಮೋಟಾರ್ ಸೈಕಲ್ನ ಹಿಂಭಾಗಕ್ಕೆ ಗುದ್ದಿಸಿದನು.ಪರಿಣಾಮವಾಗಿ, ರಮೇಶ್ ಸುತಾರ್ಗೆ ತೀವ್ರ ಗಾಯಗಳುಂಟಾದವು.ಕೂಡಲೇ ಆತನನ್ನು ಅಲೆಘಾಟಾದಲ್ಲಿರುವ ಡಾ. ಟೋಕಣೆಯವರ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು, ಅಲ್ಲಿ ಆತನಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು ಮತ್ತು ಅವರ ಸಲಹೆ ಮೇರೆಗೆ ಪೂನಾದಲ್ಲಿರುವ ಸಸೂನ್ ಆಸ್ಪತ್ರೆಗೆ ಅದೇ ದಿನ ಸ್ಥಳಾಂತರಿಸಿ, ಸದರಿ ಆಸ್ಪತ್ರೆಯಲ್ಲಿ ಒಳರೋಗಿಯನ್ನಾಗಿ ದಾಖಲು ಮಾಡಲಾಯಿತು.ರಮೇಶನುದಿನಾಂಕ: 20.03.2017 ರಂದು ಗಾಯಗಳಿಂದಾಗಿ ಮರಣ ಹೊಂದಿದನು.ಅಪಘಾತದ ಪ್ರತ್ಯಕ್ಷ ಸಾಕ್ಷಿ ಎಂದು ಹೇಳಲಾಗಿರುವ ಪ್ರವೀಣ್ ಲೋಹಾರ್ ಹೆಸರಿನ ಮೃತ ರಮೇಶನ ಭಾವಮೈದುನನು, ಅಲೆಘಾಟಾ ಪೊಲೀಸ್ ಠಾಣೆ, ಪೂನಾ ಗ್ರಾಮೀಣ, ಮಹಾರಾಷ್ಟ್ರ, ಇಲ್ಲಿದಿನಾಂಕ:

27.04.2017 ರಂದು ದೂರನ್ನು ಸಲ್ಲಿಸಿದನು.ಭಾರತ ದಂಡ ಸಂಹಿತೆಯ 279, 337, 338, 304 ( ಎ), 427 ನೇ ಪ್ರಕರಣಗಳ ಮತ್ತು ಮೋಟಾರು ವಾಹನಗಳ ಅಧಿನಿಯಮದ 184 ಮತ್ತು 134 (ಬಿ) ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಅಪರಾಧಸಂಖ್ಯೆ: 49/2017 ರಲ್ಲಿ ಪ್ರಕರಣವನ್ನು ದಾಖಲಿಸಲಾಯಿತು.ಮೃತನ ಪತ್ನಿ, ಮಕ್ಕಳು ಮತ್ತು ತಾಯಿಯು ಬಡ್ಡಿ ಸಹಿತ 35,00,000/- ರೂ.ಗಳ ಪರಿಹಾರವನ್ನು ಕ್ಲೇಮು ಮಾಡಿ ನ್ಯಾಯಾಧಿಕರಣದ ಮುಂದೆ ಎಮ್.ವಿ.ಸಿ.ಸಂಖ್ಯೆ: 1932/2017 ನ್ನು ಸಲ್ಲಿಸಿದರು.ನ್ಯಾಯಾಧಿಕರಣವು, ಪ್ರಶ್ನಿತ ತೀರ್ಪ ಮತ್ತು ಐತೀರ್ಪಿನ ಮೂಲಕ, ಅರ್ಜಿ ಸಲ್ಲಿಸಿದ ದಿನಾಂಕದಿಂದ ಹಣ ವಸೂಲಿಯಾಗುವವರೆಗೆ ವಾರ್ಷಿಕ ಶೇಕಡ 6 ರ ದರದ ಬಡ್ಡಿ ಸಹಿತವಾಗಿ ಒಟ್ಟು 16,55,000/- ರೂ.ಗಳ ಮೊತ್ತವನ್ನು ನೀಡಲು ಆದೇಶಿಸಿತು.

4. ಕ್ಲೇಮುದಾರರು ಪ್ರಾಮಾಣಿಕತೆಯಿಂದ ನ್ಯಾಯಾಧಿಕರಣವನ್ನು ಸಂಪರ್ಕಿಸಿಲ್ಲ ಮತ್ತು ಅವರು ವಂಚನೆಯ ಅಪರಾಧಿಗಳಾಗಿರುವರು ಎಂದು ವಿಮಾದಾರನ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಪೊಲೀಸ್ ದೂರನ್ನು ಸಲ್ಲಿಸುವಲ್ಲಿ ಅತಿಯಾದ ವಿಳಂಬವಾಗಿದ್ದು, ಅದನ್ನು ಕುರಿತು ವಿವರಣೆಯನ್ನೇ ನೀಡಿರುವುದಿಲ್ಲ; ಪ್ರತ್ಯಕ್ಷ ಸಾಕ್ಷಿದಾರನೆಂದು ಹೇಳಲಾಗಿರುವ ದೂರುದಾರನನ್ನು ವಿಚಾರಣೆ ಮಾಡಿಲ್ಲ; ಅಪಘಾತಕ್ಕೀಡಾಗಿದೆ ಎಂದು ಆರೋಪಿಸಿದ ಮೋಟಾರ್ ಸೈಕಲ್ ಪ್ರಶ್ನಿತ ಅಪಘಾತದಲ್ಲಿ ಜಾರಿಯಾಗಿಲ್ಲ ಮತ್ತು ಕ್ಲೇಮುದಾರರು ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಜಿಸುವಲ್ಲಿ ಸಫಲರಾಗಿದ್ದಾರೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಅಲ್ಲದೆ ಅವರು, ಸಸೂನ್ ಆಸ್ಪತ್ರೆ, ಪೂನಾದಲ್ಲಿ ಮೃತನನ್ನು ಸೇರಿಸಿದ್ದನ್ನು ತೋರಿಸಲು ಯಾವುದೇ ವೈದ್ಯಕೀಯ ದಾಖಲೆಗಳಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ನ್ಯಾಯಾಧಿಕರಣವು ನೀಡಿದ ಪರಿಹಾರದ ಪ್ರಮಾಣವು ಹೆಚ್ಚಾಗಿರುವುದರಿಂದ, ಅಪೀಲಿಗೆ ಅನುಮತಿ ನೀಡಲು ಅವರು ಮನವಿ ಮಾಡಿಕೊಂಡಿದ್ದಾರೆ.

5. ಇನ್ನೊಂದೆಡೆ, 1 ರಿಂದ 4 ರವರೆಗಿನ ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿಗಳು ಪೊಲೀಸ್ ದೂರನ್ನು ಸಲ್ಲಿಸುವಲ್ಲಿ ಉಂಟಾದ ವಿಳಂಬವು, ಮೋಟಾರ್ ಅಪಘಾತಗಳ ಕ್ಲೇಮು ಮೊಕದ್ದಮೆಗಳಲ್ಲಿ ಕ್ಲೇಮು ಅರ್ಜಿಯ ಮೇಲೆ ಯಾವುದೇ ಪರಿಣಾಮವನ್ನು ಹೊಂದಿರುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ತಮ್ಮ ವಾದಕ್ಕೆ ಸಮರ್ಥನೆಯಾಗಿ ಅವರು, ರವಿ ವಿರುದ್ಧ ಬದರಿನಾರಾಯಣ ಮತ್ತು ಇತರರು ಎಐಆರ್ 2011 ಎಸ್ಸಿ 1226 334 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಚ ಅವಲಂಬಿಸಿದ್ದಾರೆ.ಅಪರಾಧಕ್ಕೀಡಾಗಿದೆ ಎಂದು ಆರೋಪಿಸಲಾದ ವಾಹನದ ವಿವರಗಳನ್ನು ದೂರಿನಲ್ಲಿ ಮತ್ತು ನಿಶಾನೆ-ಪಿ .3 ರಲ್ಲಿರುವ ವಾಹನದ ಪಂಚನಾಮೆಯಲ್ಲಿ ಸಹ ಉಲ್ಲೇಖಿಸಲಾಗಿರುವುದರಿಂದ, ಯಾವುದೇ ಮೋಸ ಎಸಗಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಅವರು ನಿಶಾನೆ-ಪಿ .5 ಮತ್ತು ಪಿ.ಕನ್ನು ಸಹ ಉಲ್ಲೇಖಿಸಿದ್ದು, ಸದರಿ ದಸ್ತಾವೇಜುಗಳು, ಮೃತನನ್ನುದಿನಾಂಕ: 15.03.2017 ರಂದು ಸೂಸನ್ ಆಸ್ಪತ್ರೆಯಲ್ಲಿ ಸೇರಿಸಲಾಗಿತ್ತು ಮತ್ತು ಆತನುದಿನಾಂಕ: 20.03.2017 ರಂದು ಸದರಿ ಆಸ್ಪತ್ರೆಯಲ್ಲಿ ಮರಣ ಹೊಂದಿದನು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆಂದು ವಾದಿಸಿದ್ದಾರೆ.ನ್ಯಾಯಾಧಿಕರಣವು ಪರಿಗಣಿಸಿದ ಮೃತನ ಕಲ್ಪಿತ ಆದಾಯವು ಕಡಿಮೆ ಇದ್ದು, ಸಾಂಪ್ರದಾಯಿಕ ಶೀರ್ಷಿಕೆಗಳ ಅಡಿಯಲ್ಲೂ ಸಹ, ಪರಿಹಾರವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ ಮತ್ತು ಅದಕ್ಕಾಗಿ ಅವರು ತಮ್ಮ ಅಪೀಲನ್ನು ಪುರಸ್ಕರಿಸುವಂತೆ ಮನವಿ ಮಾಡಿಕೊಂಡಿದ್ದಾರೆ.

6. ಪಕ್ಷಕಾರರು ವಾದಿಸಿದ ಪರಸ್ಪರ ವಾದಗಳನ್ನು ನಾವು ಪರಿಗಣಿಸಿದ್ದೇವೆ ಮತ್ತು ದಾಖಲೆಯಲ್ಲಿ ಲಭ್ಯವಿರುವ ಎಲ್ಲಾ ಸಾಕ್ಷಿ-ಪುರಾವೆಗಳನ್ನು ಸಹ ಅವಲೋಕಿಸಿದ್ದೇವೆ.

7. ಪ್ರಶ್ನಿತ ಅಪಘಾತವುದಿನಾಂಕ: 15.03.2017 ರಂದು ಸಂಭವಿಸಿದೆ ಎಂದು ಆರೋಪಿಸಲಾಗಿದೆ.ಮೃತನ ಭಾವಮೈದುನನಾಗಿರುವ ದೂರುದಾರನು ಸಹ ಅಪಘಾತದ ಪ್ರತ್ಯಕ್ಷ ಸಾಕ್ಷಿಯಾಗಿರುವನಾದರೂ, ಕ್ಷೇಮುದಾರರು ಆತನನ್ನು ವಿಚಾರಣೆ ಮಾಡಿರುವುದಿಲ್ಲ.ಆತನಿಗೆ ಚೆನ್ನಾಗಿ ತಿಳಿದಿರುವ ಕಾರಣಗಳಿಂದಾಗಿ, ಅಪಘಾತವಾದ ನಂತರ ಕೂಡಲೇ ಯಾವುದೇ ಪೊಲೀಸ್ ದೂರನ್ನು ಆತನು ಸಲ್ಲಿಸಿರುವುದಿಲ್ಲ.ಮೃತನನ್ನು ಅಲೆಘಾಟದಲ್ಲಿರುವ ಹತ್ತಿರದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು ಮತ್ತು ಆ ತರುವಾಯ ಅದೇ ದಿನದಂದು, ಆತನನ್ನು ಸಸನ್ ಆಸ್ಪತ್ರೆ, ಪೂನಾಗೆ ಸ್ಥಳಾಂತರಿಸಲಾಗಿತ್ತು.ಸದರಿ ಆಸ್ಪತ್ರೆಯಲ್ಲಿ ಆತನುದಿನಾಂಕ: 20.03.2017 ರಂದು ಮರಣ ಹೊಂದಿದನು.ದಿನಾಂಕ: 15.03.2017 ರಿಂದ 20.03.2015 ರವರೆಗೆ ಸೂಸನ್ ಆಸ್ಪತ್ರೆಯಲ್ಲಿ ಮೃತನಿಗೆ ಚಿಕಿತ್ಸೆ ನೀಡಲಾಗಿತ್ತೆಂದು ತೋರಿಸುವ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.ನಿಶಾನೆ ಪಿ -5, ಮೃತನ ಮರಣಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಯಿಂದ ಪೊಲೀಸರಿಗೆ ನೀಡಿದ ಸೂಚನೆಯಾಗಿದೆ ಮತ್ತು ನಿಶಾನೆ-ಪಿ .6 ಮರಣೋತ್ತರ ಪರೀಕ್ಷಾ ವರದಿಯಾಗಿದೆ.ನಿಶಾನೆ-ಪಿ .5 ಮತ್ತು ಪಿ .6 ನ್ನು ಅವಲೋಕಿಸಲಾಗಿ, ಆಸ್ಪತ್ರೆಯಲ್ಲಿ ಈ ಪ್ರಕರಣವನ್ನು " ವೈದ್ಯಕೀಯ-ಕಾನೂನು ಪಕರಣ " ವನ್ನಾಗಿ ಪರಿಗಣಿಸಿ ಚಿಕಿತ್ಸೆ ನೀಡಲಾಗಿದೆ ಎಂಬುದು ಅತ್ಯಂತ ಸ್ಪಷ್ಟವಾಗುತ್ತದೆ.

8. ತಪಾಸಣೆ ಮಾಡುವ ವೈದ್ಯನು ಆಸ್ಪತ್ರೆಗೆ ದಾಖಲಾದ ಕಾರಣದ ಬಗ್ಗೆ ಸಂಕ್ಷಿಪ್ತ ವೃತ್ತಾಂತವನ್ನು ಟಿಪ್ಪಣಿ ಮಾಡಿಕೊಂಡ ಮತ್ತು ರೋಗಿಯ ವೈದ್ಯಕೀಯ (ಕ್ಲಿನಿಕಲ್) ಪರೀಕ್ಷೆ ನಡೆಸಿದ ನಂತರ, ಅಂಥ ಗಾಯದ ಅಥವಾ ಅಸ್ವಸ್ಥತೆಯ ಯಾವುದೇ ಪ್ರಕರಣವನ್ನು ಕಾನೂನು ಜಾರಿ ಏಜನ್ಸಿಗಳು ಸದರಿ ಗಾಯ ಅಥವಾ ಅಸ್ವಸ್ಥತೆಗೆ ಸಂಬಂಧಿಸಿದ ವಿಷಯವನ್ನು ನಿಶ್ಚಿತಪಡಿಸಿಕೊಂಡು ಹೊಣೆಗಾರಿಕೆಯನ್ನು ನಿಗದಿಪಡಿಸುವುದನ್ನು ಖಾತರಿಪಡಿಸುತ್ತವೆಂಬುದನ್ನು ಪದ್ಯಾಲೋಚಿಸಿ, ಆತನು ಸದರಿ ಪ್ರಕರಣವನ್ನು ವೈದ್ಯಕೀಯ ಕಾನೂನು ಪ್ರಕರಣವೆಂದು ಪರಿಗಣಿಸತಕ್ಕದ್ದು ಮತ್ತು ಆ ತರುವಾಯ ಕಾನೂನಿಗನುಗುಣವಾಗಿ ಮುಂದುವರಿಯತಕ್ಕದ್ದು.ಒಂದು ಪ್ರಕರಣವನ್ನು ವೈದ್ಯಕೀಯ-ಕಾನೂನು ಪ್ರಕರಣವೆಂದು ವರ್ಗೀಕರಿಸುವ ನಿರ್ಣಯವು ಉತ್ತಮ ವೃತ್ತಿಪರ ತೀರ್ಪಾಗುತ್ತದೆ.ತಪಾಸಣೆ ಮಾಡುವ ವೈದ್ಯನ್ನು ರೋಗಿ ವೃತ್ತಾಂತವನ್ನು ಪ್ರಕಟಪಡಿಸಿದ, ರೋಗಿಯ ಮತ್ತು ಆತನ ಸಹಚರ ಯಾರಾದರೂ ಇದ್ದರೆ ಆತನ ವಿವರಗಳನ್ನು ಟಿಪ್ಪಣಿ ಮಾಡಿಕೊಂಡ ಮತ್ತು ವೈದ್ಯಕೀಯ (ಕ್ಲಿನಿಕಲ್) ಪರೀಕ್ಷೆ ನಡೆಸಿದ ನಂತರ, ಕಾನೂನು ಜಾರಿ ಏಜನ್ಸಿಯು ತನಿಖೆ ಮಾಡುವುದು ಸೂಕ್ತವೆಂದು ಭಾವಿಸಿ, ನಂತರ ಆತನು ಆ ಪ್ರಕರಣವನ್ನು ವೈದ್ಯಕೀಯ-ಕಾನೂನು ಪ್ರಕರಣವೆಂದು ಪರಿಗಣಿಸತಕ್ಕದ್ದು.ಎಲ್ಲಾ ಆಸ್ಪತ್ರೆಗಳು/ವೈದ್ಯಾಧಿಕಾರಿಗಳು ವೈದ್ಯಕೀಯ-ಕಾನೂನು ರಿಜಿಸ್ಟರನ್ನು ನಿರ್ವಹಿಸುವುದು ಅಗತ್ಯವಾಗಿದ್ದು, ಅದರಲ್ಲಿ ರೋಗಿಯ ಗಾಯ ಅಥವಾ ಕಾಯಿಲೆ, ಖಾಸಗಿ ವಿವರಗಳು, ಗುರುತಿನ ಚಿಹ್ನೆಗಳು, ಜೊತೆಗಿರುವ ವ್ಯಕ್ತಿಯ ವಿವರಗಳ ಬಗೆಗಿನ ಮಾಹಿತಿಯನ್ನು ಟಿಪ್ಪಣಿ ಮಾಡಬೇಕಾಗುತ್ತದೆ.ಒಮ್ಮೆ ತಪಾಸಣೆ ಮಾಡುವ ವೈದ್ಯನು ಪ್ರಕರಣವನ್ನು ವೈದ್ಯಕೀಯ ಕಾನೂನು ಪ್ರಕರಣವನ್ನಾಗಿ ಪರಿಗಣಿಸಲು ನಿರ್ಧರಿಸಿದರೆ, ಕೂಡಲೇ ಆತನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 39 ನೇ ಪ್ರಕರಣ ಅಡಿಯಲ್ಲಿ ಉಪಬಂಧಿಸಿದಂತೆ ಅಧಿಕಾರವ್ಯಾಪ್ತಿ ಹೊಂದಿರುವ ಪೊಲೀಸರಿಗೆ ತಿಳಿಸುವ ಅಗತ್ಯವಿರುತ್ತದೆ.ಹಾಗೆ ಮಾಡುವುದಕ್ಕೆ ವಿಫಲನಾದರೆ, ಭಾರತ ದಂಡ ಸಂಹಿತೆಯ 176 ನೇ ಅಥವಾ 202 ನೇ ಪ್ರಕರಣಗಳ ಅಡಿಯಲ್ಲಿ ಪ್ರಾಸಿಕ್ಯೂಷನ್ಗೆ ಗುರಿಯಾಗಬೇಕಾಗಬಹುದು.

9. ವೈದ್ಯಕೀಯ-ಕಾನೂನು ಮೊಕದ್ದಮೆಯಲ್ಲಿ, ಮರಣ ಹೊಂದಿದ ಸಂದರ್ಭದಲ್ಲಿ, ತಪಾಸಣೆ ಮಾಡಿದ ವೈದ್ಯ ಅಥವಾ ಆಸ್ಪತ್ರೆಯು ಶವವನ್ನು ಸಂಬಂಧಿಕರಿಗೆ ಹಸ್ತಾಂತರಿಸುವುದಿಲ್ಲ.ಇನ್ನೊಂದೆಡೆ, ಶವವನ್ನು ಪೊಲೀಸರಿಗೆ ಹಸ್ತಾಂತರಿಸಲಾಗುತ್ತದೆ ಮತ್ತು ಪೊಲೀಸರು ವೈದ್ಯಕೀಯ-ಕಾನೂನಿನ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ನಂತರ ಸಂಬಂಧಿಕರಿಗೆ ಅದನ್ನು ಹಸ್ತಾಂತರಿಸುತ್ತಾರೆ.ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 174 ನೇ ಪ್ರಕರಣವು, ಸಂಶಯಿತ ಅಸಹಜ ಕಾರಣಗಳಿಂದಾಗಿ ಮರಣ ಸಂಭವಿಸಿದ್ದಕ್ಕೆ ಸಂಬಂಧಿಸಿದಂತೆ ಪೊಲೀಸರಿಂದ ಮಾಹಿತಿಯನ್ನು ಸ್ವೀಕರಿಸಿದ ನಂತರ, ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಶವ ಮಹಜರು ನಡೆಸುವಂತೆ ಅಗತ್ಯಪಡಿಸಿ, ಆ ತರುವಾಯದಲ್ಲಿ, ಮರಣದ ಕಾರಣವನ್ನು ಸಾಬೀತುಪಡಿಸುವುದಕ್ಕಾಗಿ ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಅದನ್ನು ಕಳಹಿಸುವ ಅಗತ್ಯವಿದೆ.ಅಸಹಜ ಸಾವಿನ ಪ್ರಕರಣವನ್ನು ದಾಖಲಿಸಬೇಕಾದ ಮತ್ತು ದಂಡಾಧಿಕಾರಿಗಳು ಮರಣದ ಸ್ಪಷ್ಟ ಕಾರಣವನ್ನು ತಿಳಿಯಲು ತನಿಖೆ ನಡೆಸಬೇಕಾದ ಅಗತ್ಯವಿದೆ.ಸದರಿ ಅಧಿಕಾರಿಯು ಮೃತನ ಹತ್ತಿರದ ಸಂಬಂಧಿಗಳು ಯಾರಾದರೂ ಇದ್ದರೆ, ಅವರ ಹೇಳಿಕೆಗಳನ್ನು ದಾಖಲಿಸತಕ್ಕದ್ದು, ತನಿಖೆ ಮಾಡಿ, ಮರಣದ ಕಾರಣವನ್ನು ಹೇಳಿ ಅಸಹಜ ಸಾವು ಎಂದು ಕರೆಯಲಾಗುವ ಒಂದು ವರದಿಯನ್ನು ಸಲ್ಲಿಸತಕ್ಕದ್ದು.ಮರಣದ ಕಾರಣವನ್ನಾಧರಿಸಿ, ಪೊಲೀಸರು ಮೊಕದ್ದಮೆಯನ್ನು ಕೊನೆಗೊಳಿಸತಕ್ಕದ್ದು ಅಥವಾ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸತಕ್ಕದ್ದು.ಮರಣವು ಸಹಜವೇ ಅಥವಾ ಅಸಹಜವೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ 174 ನೇ ಪ್ರಕರಣದ ಅಡಿಯಲ್ಲಿನ ತನಿಖೆ ನಡೆಸಲಾಗುತ್ತದೆ.ಅದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 157 ನೇ ಪ್ರಕರಣದ ಅಡಿಯಲ್ಲಿ ಪರ್ಯಾಲೋಚಿಸಲಾದಂಥ ತನಿಖೆ ಅಲ್ಲ. ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲು ಒಮ್ಮೆ ಪೊಲೀಸರು ನಿರ್ಧರಿಸಿದ ನಂತರ ಮಾತ್ರವೇ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 154 ನೇ ಮತ್ತು 157 ನೇ ಪ್ರಕರಣಗಳ ಅಡಿಯಲ್ಲಿ ಉಪಬಂಧಿಸಿದಂತೆ ತನಿಖೆಯನ್ನು ಮುಂದುವರಿಸತಕ್ಕದ್ದು.

10. ಪ್ರಸ್ತುತ ಮೊಕದ್ದಮೆಯನ್ನು, ಒಪ್ಪಿಕೊಂಡಿರುವಂತೆ ವೈದ್ಯಕೀಯ-ಕಾನೂನು ಮೊಕದ್ದಮೆ ಎಂದು ಪರಿಗಣಿಸಲಾಗಿತ್ತು.ನಿಶಾನೆ-ಪಿ .5 ಮತ್ತು ಪಿ.ಇನ್ನು ಅವಲೋಕಿಸಿದ ನಂತರ, ಸೂಸನ್ ಆಸ್ಪತ್ರೆಯ ಪ್ರಾಧಿಕಾರಿಗಳು, ಮರಣದ ಬಗ್ಗೆ ಹವೇಲಿ ಪೊಲೀಸ್ ಠಾಣೆ, ಪುಣೆ ಇವರಿಗೆ ಸೂಚಿಸಿದ್ದರು ಮತ್ತು ಮೃತನ ದೇಹವನ್ನು ಹವೇಲಿ ಪೊಲೀಸ್ ಠಾಣೆಗೆ ಹಸ್ತಾಂತರಿಸಿದ್ದರು, ಪ್ರತಿಯಾಗಿ, ಹವೇಲಿ ಪೊಲೀಸರು ಮರಣದ ನಿಖರ ಕಾರಣವನ್ನು ತಿಳಿದುಕೊಳ್ಳಲು ಮರಣೋತ್ತರ ಪರೀಕ್ಷೆ ನಡೆಸಲು ಆಸ್ಪತ್ರೆ ಪ್ರಾಧಿಕಾರಿಗಳನ್ನು ಕೋರಿದ್ದರು ಎಂಬುದು ಅತ್ಯಂತ ಸ್ಪಷ್ಟವಾಗಿ ತಿಳಿದುಬರುತ್ತದೆ.ಒಮ್ಮೆ ಪ್ರಕರಣವನ್ನು ವೈದ್ಯಕೀಯ ಕಾನೂನು ಪ್ರಕರಣವೆಂದು ಪರಿಗಣಿಸಿದರೆ, ಆಗ ಖಂಡಿತವಾಗಿಯೂ, ಅಧಿಕಾರವ್ಯಾಪ್ತಿಯುಳ್ಳ ಪೊಲೀಸರು ಬಂದು, ಅಸಹಜ ಸಾವಿನ ಪ್ರಕರಣವನ್ನು ದಂಡಾಧಿಕಾರಿಗಳಿಗೆ ವರದಿ ಮಾಡುತ್ತಾರೆ, ತದನಂತರದಲ್ಲಿ ದಂಡಾಧಿಕಾರಿಗಳು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 174 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಕ್ರಮ ಜರುಗಿಸುತ್ತಾರೆ.ಮೃತನ ಭಾವಮೈದುನನಾದ ದೂರುದಾರನು ಪ್ರತ್ಯಕ್ಷ ಸಾಕ್ಷಿ ಎಂದು ಹೇಳಲಾಗಿದ್ದು, ಸಾಮಾನ್ಯ ಸಂದರ್ಭದಲ್ಲಿ, ಆತನು ಆಸ್ಪತ್ರೆಗೆ ಗಾಯಗೊಂಡವನೊಂದಿಗೆ ಇರುವುದನ್ನು ನಿರೀಕ್ಷಿಸಲಾಗುತ್ತದೆ.ದೂರುದಾರನಾಗಲಿ ಅಥವಾ ಮೃತ ರಮೇಶನ ಪತ್ನಿಯಾಗಿರುವ ಆತನ ಸಹೋದರಿಯಾಗಲಿ, ಮೃತನಿಗೆ ಗಾಯಗಳುಂಟಾದುದಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಅಥವಾ ದಂಡಾಧಿಕಾರಿಗಳಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.ಅವರು ಯಾವುದಾದರೂ ಹೇಳಿಕೆಯನ್ನು ನೀಡಿದ್ದರೆ, ಆಗ ಖಂಡಿತವಾಗಿಯೂ ಪೊಲೀಸರು ಪ್ರಥಮ ಮಾಹಿತಿ ವರದಿಯನ್ನು

ನೋಂದಾಯಿಸಿರುತ್ತಿದ್ದರು.ಈ ಸಂಬಂಧದಲ್ಲಿ ನ್ಯಾಯಾಧಿಕರಣದ ಮುಂದೆ ಯಾವುದೇ ಸಾಕ್ಷ್ಯವನ್ನು ದೂರುದಾರರು ದಾಖಲೆಯಲ್ಲಿ ಸಲ್ಲಿಸಿರುವುದಿಲ್ಲ.ಇನ್ನೊಂದೆಡೆ, 43 ದಿನಗಳ ವಿಳಂಬದ ನಂತರ, ದೂರುದಾರನು,ದಿನಾಂಕ: 27.04.2017 ರಂದು ಅಲೆ ಕ್ರಾಸ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ದೂರನ್ನು ಸಲ್ಲಿಸಿದ್ದಾನೆ.ಆರೋಪ ಪಟ್ಟಿಯನ್ನು ದಾಖಲಿಸಿದ್ದ ಸದರಿ ಪೊಲೀಸರು, ಆಸ್ಪತ್ರೆಯಿಂದಾಗಲಿ ಅಥವಾ ಮೃತನ ಶರೀರವನ್ನು ಆಸ್ಪತ್ರೆಯು ಹಸ್ತಾಂತರಿಸಿದ್ದ ಹವೇಲಿ ಪೊಲೀಸ್ ಠಾಣೆಯಿಂದಾಗಲಿ ಯಾವುದೇ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಆಸಕ್ತಿ ವಹಿಸಿಲ್ಲ.ಪೊಲೀಸ್ ದೂರನ್ನು ಸಲ್ಲಿಸುವಲ್ಲಿ ಆದ ವಿಳಂಬ ಕುರಿತು ದೂರುದಾರನು ವಿವರಿಸಿರುವುದಕ್ಕೆ ಹೋಗಿಲ್ಲ.

11. ದೂರುದಾರನು ಅವಲಂಬಿಸಿರುವ ರವಿ ಮೊಕದ್ದಮೆಯಲ್ಲಿ (ಪೂರ್ವೋಕ್ತ) ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪ್ರಸ್ತುತ ಮೊಕದ್ದಮೆಯ ಚ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲ.ಸದರಿ ಮೊಕದ್ದಮೆಯಲ್ಲಿ, ಅಪಘಾತಕ್ಕೊಳಗಾಗಿದೆ ಎಂದು ಆರೋಪಿಸಲಾಗಿರುವ ವಾಹನದ ಮಾಲೀಕನು ನ್ಯಾಯಾಧಿಕರಣದ ಮುಂದೆ ಹಾಜರಾಗಿದ್ದಾನೆ ಮತ್ತು ಅಪಘಾತದ ಬಗ್ಗೆ ತನಗೆ ಗೊತ್ತಿದೆ ಹಾಗೂ ತನ್ನ ವಾಹನವು ಅಪಘಾತಕ್ಕೊಳಗಾಗಿತ್ತು ಎಂಬುದನ್ನು ಒಪ್ಪಿಕೊಂಡಿದ್ದಾನೆ.ಈ ಮೊಕದ್ದಮೆಯಲ್ಲಿ, ವಾಹನದ ಮಾಲೀಕನು ಹಾಜರಾಗಿಲ್ಲ.ಅಪಘಾತಕ್ಕೊಳಗಾಗಿದೆ ಎಂದು ಆರೋಪಿಸಲಾಗಿರುವ ವಾಹನದ ಸವಾರನ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಮೊಕದ್ದಮೆ ಏನಾಯಿತು ಎಂಬುದನ್ನು ತೋರಿಸಲು ನ್ಯಾಯಾಧಿಕರಣದ ಮುಂದೆ ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.ಆರೋಪ ಪಟ್ಟಿ ದಾಖಲಿಸಿದ ತನಿಖಾಧಿಕಾರಿಯನ್ನು ಸಹ ವಿಚಾರಣೆ ಮಾಡಿರುವುದಿಲ್ಲ.ದಾಖಲೆಯಲ್ಲಿನ ಸಾಕ್ಷ್ಯದಿಂದ, ಮೊದಲ ನೋಟದಲ್ಲೇ ಅದು ಕ್ಲೇಮುದಾರರು ಮುಖ್ಯ ಸಂಗತಿಗಳನ್ನು ಅಡಗಿಸಿದ್ದಾರೆ ಮತ್ತು ಅಲೆ ಕ್ರಾಸ್ ಪೊಲೀಸರ ಮುಂದೆ ದೂರನ್ನು ದಾಖಲಿಸುವಲ್ಲಿ ಸಫಲರಾಗಿದ್ದಾರೆ, ಪೊಲೀಸರು ಸೂಕ್ತ ತನಿಖೆ ನಡೆಸದೆ, ಆರೋಪಿಸಲಾಗಿರುವ ವಾಹನವನ್ನು ಸಿಕ್ಕಿಹಾಕಿಸಿ ಆರೋಪ ಪಟ್ಟಿಯನ್ನು ದಾಖಲಿಸಿದ್ದಾರೆ ಎಂಬುದು ಕಂಡುಬರುತ್ತದೆ.

12. ಯುನೈಟೆಡ್ ಇಂಡಿಯಾ ಇನ್ಸುರನ್ಸ್ ಕಂಪನಿ ನಿಯಮಿತ ವಿರುದ್ಧ ರಾಜೇಂದ್ರ ಸಿಂಗ್ ಮತ್ತು ಇತರರು (2000)**3ಎಸ್‌ಸಿಸಿ581** ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಚ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

16. ಆದುದರಿಂದ, ಹೆಚ್ಚಿನ ಪ್ರಮಾಣದ ಮೋಸವೆಂದೆನಿಸುವ ಹೊಸದಾಗಿ-ಕಂಡುಹಿಡಿದ ಸಂಗತಿಗಳ ಆಧಾರದ ಮೇಲೆ ಆದೇಶವನ್ನು ಹಿಂತೆಗೆದುಕೊಳ್ಳುವ ಸಂಬಂಧದಲ್ಲಿನ ಪರಿಹಾರವನ್ನು, ಅಂಥ ಸನ್ನಿವೇಶದಲ್ಲಿ ರದ್ದು ಮಾಡಲಾಗುವುದಿಲ್ಲ ಎಂಬುದರಲ್ಲಿ ನಮಗೆ ಯಾವುದೇ ಸಂಶಯವಿಲ್ಲ.ಕೇಮಿನ ಮೂಲ ಕಾರಣದ ಮೇಲೆ ಪರಿಣಾಮ ಬೀರುವಂಥ ಆಯಾಮದ ಮೋಸ ಅಥವಾ ತಪ್ಪು ನಿರೂಪಣೆಯ ಮೂಲಕ ಆದೇಶವನ್ನು ಕುಟಿಲತೆಯಿ ಂ ದ ಹೊರಡಿಸುವಂತೆ ಮಾಡಲಾಗಿದೆ ಎಂದು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣಕ್ಕೆ ಮನವರಿಕೆಯಾದರೆ, ಅದು ತನ್ನ ಆದೇಶವನ್ನು ಹಿಂಪಡೆಯಲು ಅಧಿಕಾರ ಹೊಂದಿಲ್ಲವೆಂದು ಪರಿಗಣಿಸಲಾಗುವದಿಲ್ಲ.

17. ಕ್ಲೇಮುದಾರರು ಕ್ಲೇಮು ಅರ್ಜಿಗಳಲ್ಲಿ ವಿವರಿಸಿರುವ ಅಪಘಾತದಲ್ಲಿ ಭಾಗಿಯಾಗಿಲ್ಲವೆಂದು ಅಪೀಲುದಾರ-ವಿಮಾ ಕಂಪನಿಯು ಮಾಡಿದ ಆರೋಪವನ್ನು, ವಿಷಯದ ಬಗ್ಗೆ ಹೆಚ್ಚಿನ ತನಿಖೆ ನಡೆಸದೆ

ತಿರಸ್ಕರಿಸಲಾಗುವುದಿಲ್ಲ, ತೀರ್ಪನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಅರ್ಜಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕ್ಲೇಮುದಾರರನ್ನು ಕೇಳಿದಾಗ, ಅವರು ಸದರಿ ಆರೋಪವನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುವುದಿಲ್ಲ.ನ ಂ ತರ ಕ್ಲೇಮುದಾರರು, ಹಿ ಂ ಪಡೆಯುವ ಅರ್ಜಿಯ ಅ ಕಾನೂನುಬದ್ಧವಾಗಿ ಸಮರ್ಥನೀಯವಲ್ಲವೆಂಬ ವಾದಕ್ಕೆ ಅವರ ಪ್ರತಿರೋಧವನ್ನು ಸೀಮಿತಗೊಳಿಸಿದ್ದಾರೆ.ಆದುದರಿಂದ, ಈಗ ವಿಮಾ ಕಂಪನಿಯು ಆರೋಪಿಸಿದ ಮೋಸದ ಕಾರಣ ಮೇರೆಗೆ, ಕೇಮನ್ನು ವಿರೋಧಿಸಲು ಅವಕಾಶ ನೀಡಬೇಕೆಂದು ನಾವು ತೀವ್ರವಾಗಿ ಪರಿಭಾವಿಸುತ್ತೇವೆ.ವಿಮಾ ಕಂಪನಿಯು ತನ್ನ ವಾದಗಳನ್ನು ರುಜುವಾತುಪಡಿಸಲು ಅದಕ್ಕೆ ಅವಕಾಶವನ್ನು ನೀಡಲು ನಾವು ವಿಫಲರಾದರೆ, ಅದು ಖಂಡಿತವಾಗಿಯೂ ಗಂಭೀರ ನ್ಯಾಯ ವಿಫಲತೆಯಾಗುತ್ತದೆ.

18. ತತ್ಪರಿಣಾಮವಾಗಿ, ನಾವು ಪ್ರಶ್ನಿತ ಆದೇಶಗಳನ್ನು ತಳ್ಳಿಹಾಕಿ, ಈ ಅಪೀಲುಗಳನ್ನು ಪುರಸ್ಕರಿಸಿದ್ದೇವೆ.ಕ್ಲೇಮುದಾರರ ಪರವಾಗಿ ನ್ಯಾಯಾಧಿಕರಣವು ಹೊರಡಿಸಿದ ಐತೀರ್ಪುಗಳನ್ನು ರದ್ದುಗೊಳಿಸುತ್ತೇವೆ.ಅಪೀಲುದಾರ-ವಿಮಾ ಕಂಪನಿಯು ತನ್ನ ಆರೋಪಗಳನ್ನು ರುಜುವಾತುಪಡಿಸಲು ಅವರಿಗೆ ಸೂಕ್ತ ಅವಕಾಶ ನೀಡಿದ ನಂತರ, ಹೊಸದಾಗಿ ಕ್ಲೇಮುದಾರರು ಮಂಡಿಸಿದ ಕ್ಲೇಮುಗಳನ್ನು ಪರಿಗಣಿಸುವಂತೆ ನ್ಯಾಯಾಧಿಕರಣಕ್ಕೆ ನಾವು ನಿರ್ದೇಶಿಸುತ್ತೇವೆ.ಆರೋಪಗಳನ್ನು ಖಂಡಿಸಲು ಕ್ಲೇಮುದಾರರಿಗೂ ಸಹ ಅವಕಾಶ ನೀಡಬೇಕು. "

13. ಇಂಡಿಯನ್ ಬ್ಯಾಂಕ್ -ವಿರುದ್ಧ-ಸತ್ಯಂ ಫೈಬರ್ (ಇಂಡಿಯಾ) ಪ್ರೈವೇಟ್ ಅಮಿಟೆಡ್ (1996) 5 ಎಸ್ಸಿಸಿ 550 340 ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"22. ನ್ಯಾಯಾಲಯಕ್ಕೆ ಮೋಸ ಮಾಡುವ ಮೂಲಕ ತೀರ್ಪು ಅಥವಾ ಆದೇಶವನ್ನು ಪಡೆಯಲಾಗಿದ್ದರೆ, ಭಾರತದಲ್ಲಿ ನ್ಯಾಯಾಂಗ ವ್ಯವಸ್ಥೆಯು ವಿಶೇಷವಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 151 ನೇ ಪ್ರಕರಣದ ಮೇರೆಗೆ, ಅದನ್ನು ಹಿಂಪಡೆಯುವ ಅಂತರ್ನಿಹಿತ ಅಧಿಕಾರವನ್ನು ಹೊಂದಿದೆ.ದಾವೆ ಅಥವಾ ವ್ಯವಹರಣೆಗಳಲ್ಲಿನ ಪಕ್ಷಕಾರರು ಮೋಸ ಎಸಗಿದ ಸಂದರ್ಭದಲ್ಲಿ, ನ್ಯಾಯಾಲಯವು, ಮೋಸದಿಂದ ಪಡೆದ ಡಿಕ್ರಿಯನ್ನು ತಳ್ಳಿಹಾಕುವ ಸಂಬಂಧದಲ್ಲಿ ಪ್ರತ್ಯೇಕ ದಾವೆಯನ್ನು ಸಲ್ಲಿಸಲು ಬಾಧಿತ ಪಕ್ಷಕಾರರಿಗೆ ನಿರ್ದೇಶಿಸಬಹುದು.ಅ ಂ ತರ್ನಿಹಿತ ಅಧಿಕಾರಗಳು, ಎಲ್ಲಾ ನ್ಯಾಯಾಲಯಗಳಲ್ಲಿ, ವಿಶೇಷವಾಗಿ ವರಿಷ್ಠ ಅಧಿಕಾರವ್ಯಾಪ್ತಿಯಲ್ಲಿ ಅಂತರ್ಗತವಾಗಿರುವ ಅಧಿಕಾರಗಳಾಗಿವೆ.ಈ ಅಧಿಕಾರಗಳು ಶಾಸನದಿಂದ ದೊರೆಯದೆ, ನ್ಯಾಯಾಧಿಕರಣಗಳ ಅಥವಾ ನ್ಯಾಯಾಲಯಗಳು ತಮ್ಮ ಘನತೆಯನ್ನು ಕಾಪಾಡಿಕೊಳ್ಳಲು, ಅವುಗಳ ಪ್ರಕ್ರಿಯೆ ಮತ್ತು ನಿಯಮಗಳಿಗೆ ವಿಧೇಯತೆಯನ್ನು ಪಡೆಯಲು, ಅವುಗಳ ಅಧಿಕಾರಿಗಳನ್ನು ಅನುಚಿತ ವರ್ತನೆ ಮತ್ತು ತಪ್ಪಿನಿಂದ ರಕ್ಷಿಸಲು ಮತ್ತು ಅಗೌರಯುತ ನಡವಳಿಕೆಗೆ ದಂಡಿಸಲು ಅವುಗಳಿಗೆ ಸಾಧ್ಯವಾಗುವಂತೆ, ಅವುಗಳ ಸ್ವರೂಪ ಮತ್ತು ರಚನೆಯಿಂದ ದೊರೆತವುಗಳಾಗಿವೆ.ನ್ಯಾಯಾಲಯದ ವ್ಯವಹರಣೆಗಳ ಸುವ್ಯವಸ್ಥಿತ ನಿರ್ವಹಣೆಗೆ ಈ ಅಧಿಕಾರವು ಅತ್ಯಾವಶ್ಯಕವಾಗಿದೆ.

23. ಮೋಸವು, ನ್ಯಾಯಾಲಯದ ವ್ಯವಹರಣೆಗಳ ಗಾಂಭೀರತೆ, ನಿಯತತೆ ಮತ್ತು ಕ್ರಮಬದ್ಧತೆಯ ಮೇಲೆ ಪರಿಣಾಮ ಬೀರುವುದರಿಂದ, ಮತ್ತು ನ್ಯಾಯಾಲಯ ಪ್ರಕ್ರಿಯೆಯ ದುರ್ಬಳಕೆ ಸಹ ಆಗುವುದರಿಂದ, ನ್ಯಾಯಾಲಯಕ್ಕೆ ಮೋಸ ಮಾಡುವ ಮೂಲಕ ಪಡೆದ ಆದೇಶವನ್ನು ತಳ್ಳಿಹಾಕುವ ಅಂತರ್ನಿಹಿತ ಅಧಿಕಾರವನ್ನು ನ್ಯಾಯಾಲಯಗಳು ಹೊಂದಿವೆ ಎಂದು ನಿರ್ಣಯಿಸಲಾಗಿದೆ.ಹಾಗೆಯೇ, ಪಕ್ಷಕಾರನು ನ್ಯಾಯಾಲಯವನ್ನು ತಪ್ಪು ದಾರಿಗೆಳೆದಲ್ಲಿ ಅಥವಾ ಪಕ್ಷಕಾರನಿಗೆ ಬಾಧಕವಾಗುವ ರೀತಿಯಲ್ಲಿ

ನ್ಯಾಯಾಲಯವು ಸ್ವತಃ ಪ್ರಮಾದವೆಸಗಿದಲ್ಲಿ, ತನ್ನ ಆದೇಶವನ್ನು ಹಿಂಪಡೆಯುವ ಅಂತರ್ನಿಹಿತ ಅಧಿಕಾರವನ್ನು ನ್ಯಾಯಾಲಯವು ಹೊಂದಿದೆ.(ನೋಡಿ:ಬಿನೋಮ್ ಕೃಷ್ಣ ಮುಖರ್ಜಿ -ವಿರುದ್ಧ ಮೋಹನ್ಲಾಲ್ ಗೋಯೆಂಕಾ; ಗಜಾನಂದ್ ಷಾ ವಿರುದ್ಧ-ದಯಾನಂದ್ ಠಾಕೂರ್; ಕೃಷ್ಣಕುಮಾರ್ -ವಿರುದ್ಧ-ಜಾವಂದ್ ಸಿಂಗ್; ದೇವೇಂದ್ರ ನಾಥ್ ಸರ್ಕಾರ್ ವಿರುದ್ಧ-ರಾಮ್ ರಚಪಾಲ್ ಸಿಂಗ್; ಸೈಯದ್ ಮೊಹಮ್ಮದ್ ರಾಜಾ -ವಿರುದ್ಧ-ರಾಮ್ ಸ್ವರೂಪ್, ಬಾಂಕೆ ಬಿಹಾರಿ ಲಾಲ್ -ವಿರುದ್ಧ-ಅಬ್ದುಲ್ ರಹಮಾನ್; ಲೆಕ್ಷ್ಮಿ ಏ ಅಮ್ಮ ಚಾಕಿ ಅಮ್ಮ -ವಿರುದ್ಧ ಮಮ್ಮೆನ್ ಮಮ್ಮೆನ್) ನ್ಯಾಯಾಲಯಕ್ಕೆ ಮೋಸ ಎಸಗುವ ಮೂಲಕ ಉಂಟಾಗುವಂತೆ ಮಾಡಿದ ಮಾರಾಟವನ್ನು ರದ್ದುಗೊಳಿಸುವ (ಈಶ್ವರ್ ಮಥಾನ್ -ವಿರುದ್ಧ ಸೀತಾರಾಮ್ ಕುಮಾರ್) ಅಥವಾ ಮೋಸದಿಂದ ಪಡೆದ ಸಂಧಾನವನ್ನು ದಾಖಲಿಸುವ ಆದೇಶವನ್ನು ರದ್ದುಗೊಳಿಸುವ (ಬಿಂದೇಶ್ವರಿ ಪಿಡಿ, ಚೌಧರಿ -ವಿರುದ್ಧ-ದೇಬೇಂದ್ರ ಪಿಡಿ. ಸಿಂಗ್; ತಾರಾ ಬಾಯಿ -ವಿರುದ್ಧ-ಕೃಷ್ಣಾಸ್ವರಿ ರಾವ್) ಅಂತರ್ನಿಹಿತ ಅಧಿಕಾರವನ್ನು ಸಹ ನ್ಯಾಯಾಲಯವು ಹೊಂದಿರುತ್ತದೆ. "

14. ಕಾನೂನು ಪ್ರತಿನಿಧಿ ಮೂಲಕ ಎಸ್.ಪಿ. ಚೆಂಗಲ್ವರಾಯ ನಾಯ್ಡು (ಮೃತ) ವಿರುದ್ಧ ಕಾನೂನು ಪ್ರತಿನಿಧಿ ಮೂಲಕ ಜಗನ್ನಾಥ್ (ಮೃತ) ಮತ್ತು ಇನ್ನೊಬ್ಬರು (1994) 1 ಎಸ್ಸಿಸಿ 1 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಚ ಅಭಿಪ್ರಾಯಪಟ್ಟಿದೆ:

" ಮೋಸವು ಮತ್ತೊಬ್ಬರಿಗೆ ದೊರೆಯಬೇಕಾದ ಅನುಕೂಲವನ್ನು ಅನ್ಯಾಯದಿಂದ ಪಡೆಯುವ ಮೂಲಕ ಏನನ್ನೋ ಪಡೆಯುವ ಸಂಚಿನಿಂದ ಮಾಡಿದ ಉದ್ದೇಶಪೂರ್ವಕ ವಂಚನೆಯ ಕೃತ್ಯವಾಗಿದೆ.ಅದು ಮತ್ತೊಬ್ಬರ ನಷ್ಟದಿಂದ ಲಾಭ ಪಡೆಯುವ ಸಲುವಾಗಿ ಮಾಡಿದ ವಂಚನೆಯಾಗಿರುತ್ತದೆ.ಅದು ಅನುಕೂಲ ಪಡೆಯಲು ಉದ್ದೇಶಪೂರ್ವಕವಾದ ಕಪಟವಾಗಿರುತ್ತದೆ.ನ್ಯಾಯಾಲಯವನ್ನು ಸಂಪರ್ಕಿಸುವ ವ್ಯಾಜ್ಯಕಾರನು, ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಅವನು ಬರೆದುಕೊಟ್ಟಿರುವ ಇಲ್ಲಾ ದಸ್ತಾವೇಜುಗಳನ್ನು ಹಾಜರುಪಡಿಸಲು ಬದ್ಧನಾಗಿರುತ್ತಾನೆ.ಇನ್ನೊಂದು ಕಡೆಯ ಅನುಕೂಲವನ್ನು ಪಡೆಯುವ ಸಲುವಾಗಿ ಪ್ರಮುಖ ದಸ್ತಾವೇಜನ್ನು ಆತನು ತಡೆ ಹಿಡಿದರೆ, ಆಗ ಆತನು ನ್ಯಾಯಾಲಯಕ್ಕಷ್ಟೇ ಅಲ್ಲದೆ, ಎದುರು ಪಕ್ಷಕಾರನು ತಪ್ಪಿತಸ್ಥನಾಗುವನು. "

15. ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯದ ಸಮಗ್ರ ಅವಲೋಕನದಿಂದ, ಕ್ಲೇಮುದಾರರು ಮೋಸವನ್ನು ಎಸಗಿದ್ದಾರೆ ಮತ್ತು ತಡವಾಗಿ ದೂರನ್ನು ಸಲ್ಲಿಸಿದ್ದಾರೆ ಹಾಗೂ ಆರೋಪ ಪಟ್ಟಿ ದಾಖಲಾಗುವಂತೆ ನೋಡಿಕೊಂಡಿದ್ದಾರೆ ಎಂಬ ವಿಮಾದಾರರ ಪರ ಮಾನ್ಯ ನ್ಯಾಯವಾದಿಗಳ ವಾದದಲ್ಲಿ ನಿಜಾಂಶವಿರುವುದು ನಮಗೆ ಕಂಡುಬಂದಿದೆ.ಅಂಥ ಮೋಸದ ತನಿಖಾ ವರದಿಗಳು, ಕ್ಲೇಮುದಾರರಿಗೆ ಕೆಲವು ಆಸ್ಪತ್ರೆಗಳು ನೀಡಿದ ರೋಗಿ ಬಿಡುಗಡೆ ಸಾರಾಂಶಗಳು (discharge summaries), ಪೂರಕ ವೈದ್ಯಕೀಯ ದಸ್ತಾವೇಜುಗಳ ಆಧಾರದ ಮೇಲೆ ಮೋಸದ ಕ್ಲೇಮು ಅರ್ಜಿಯನ್ನು ಸಲ್ಲಿಸಿರುವುದು ನಮ್ಮ ಗಮನಕ್ಕೆ ಬಂದಿದ್ದು, ಇದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಲ್ಲದೆ ಮತ್ತೇನೂ ಅಲ್ಲ ಮತ್ತು ಇದನ್ನು ನಿಗ್ರಹಿಸಬೇಕಾದ ಅಗತ್ಯವಿದೆ.ಒಮ್ಮೆ ಮೋಸ ಎಸಗಲಾಗಿದೆ ಎಂದು ಆರೋಪಿಸಿದರೆ ಮತ್ತು ಅದು ಸಾಬೀತಾದರೆ, ಹಾಗೆ ಮೋಸದಿಂದ ಪಡೆದ ತೀರ್ಪನ್ನು ಮತ್ತು ಆದೇಶವನ್ನು ಕ್ಷಣ ಕಾಲವೂ ದಾಖಲಿಸಲು ಅನುಮತಿ ನೀಡಲಾಗುವುದಿಲ್ಲ.

16. ಸಾಮಾನ್ಯ ಸಂದರ್ಭಗಳಲ್ಲಿ ಮೋಸಕ್ಕೆ ಸಂಬಂಧಿಸಿದ ವಾದವನ್ನು ಪ್ರಾರಂಭದಲ್ಲೇ ವಿಮಾದಾರನು ಮಾಡಲಾಗುವುದಿಲ್ಲ.ಪಕ್ಷಕಾರರು ಮಾಡಿದ ಮೋಸವು ಮುಖ್ಯ ದಾಖಲೆಗಳು ದಾಖಲೆಗೆ ಬಂದ ನಂತರ ಮಾತ್ರವೇ ವ್ಯಕ್ತವಾಗುತ್ತದೆ.ಈ ಮೊದಲೇ ಹೇಳಿರುವಂತೆ, ಕ್ಲೇಮುದಾರರು ಸಾಕ್ಷ್ಯವನ್ನು ಅಡಗಿಸಿದ

ತಪ್ಪಿತಸ್ಥರಾಗಿರುವರು ಮತ್ತು ಅವರು ಪ್ರಾಮಾಣಿಕವಾಗಿ ನ್ಯಾಯಾಧಿಕರಣವನ್ನು ಸಂಪರ್ಕಿಸಿರುವುದಿಲ್ಲ ಎಂಬುದು ನಮಗೆ ಮೇಲ್ನೋಟಕ್ಕೆ ಕಂಡುಬಂದಿದೆ. "ಮೋಸವು " ಎಲ್ಲವನ್ನೂ ಬಿಚ್ಚಿಟ್ಟಿದೆ.ನ್ಯಾಯಾಲಯಗಳನ್ನು ತಂತ್ರದಿಂದ ಸಿಕ್ಕಿಸಿಹಾಕಿಸುವ ಅಥವಾ ಕಾನೂನು ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಪ್ರಯತ್ನಗಳ ಕುರಿತು ನಿರ್ದಯದಿಂದ ವ್ಯವಹರಿಸಬೇಕು ಮತ್ತು ಅಂಥ ಮೊಕದ್ದಮೆಗಳಲ್ಲಿನ ಎಲ್ಲಾ ಅಪರಾಧಿಗಳನ್ನು ಕಾನೂನಿನ ಅಡಿಯಲ್ಲಿ ತರಬೇಕಾದ ಅಗತ್ಯವಿದೆ.ಹಾಗೆ ಮಾಡುವಲ್ಲಿ ತಪ್ಪುವುದು ನ್ಯಾಯ ನೀಡಿಕೆ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ ಮತ್ತು ವಾಸ್ತವವಾಗಿ ಇದು ವ್ಯವಸ್ಥೆಯ ಅಣಕವಾಗುವುದು.

17. ಈ ಮೊಕದ್ದಮೆಯ ಸಂಗತಿಗಳಲ್ಲಿ ಮತ್ತು ಸಂದರ್ಭಗಳಲ್ಲಿ, ಮೊಸಕ್ಕೆ ಸಂಬಂಧಿಸಿದಂತೆ ವಿಮಾದಾರರ ವಾದವನ್ನು ರುಜುವಾತುಪಡಿಸಲು ಅವರಿಗೆ ಅವಕಾಶವನ್ನು ನೀಡಲು ನಾವು ವಿಫಲರಾದರೆ, ಅದು ಖಂಡಿತವಾಗಿಯೂ ಗಂಭೀರ ನ್ಯಾಯ ವಿಫಲತೆಗೆ ದಾರಿ ಮಾಡಿಕೊಡುತ್ತದೆ.ಆದುದರಿಂದ, ನ್ಯಾಯಾಧಿಕರಣವು ನೀಡಿದ ಪ್ರಶ್ನೆತ ತೀರ್ಪು ಮತ್ತು ಐತೀರ್ಪನ್ನು ರದ್ದುಗೊಳಿಸಿ, ಯಾವುದೇ ಹೆಚ್ಚುವರಿ ಹೇಳಿಕೆಗಳು ಇದ್ದರೆ, ಅವುಗಳನ್ನು ಸಲ್ಲಿಸಲು, ಪಕ್ಷಕಾರರಿಗೆ ಅನುಮತಿ ನೀಡುವ, ಹೆಚ್ಚಿನ ಸಾಕ್ಷ್ಯವನ್ನು ಕೇಳುವ ಮತ್ತು ಆ ನಂತರದಲ್ಲಿ ಸಾಧ್ಯವಿದ್ದಷ್ಟು ತ್ವರಿತವಾಗಿ ಕಾನೂನಿಗನುಗುಣವಾಗಿ ಮೊಕದ್ದಮೆಯನ್ನು ವಿಲೆ ಮಾಡಬೇಕೆ ಂ ಬ ನಿರ್ದೇಶನದೊಂದಿಗೆ ವಿಷಯವನ್ನು ನ್ಯಾಯಾಧಿಕರಣಕ್ಕೆ ಹಿಂದಿರುಗಿಸಲಾಗಿದೆ.ತದನುಸಾರವಾಗಿ, ಕ್ಷೇಮುದಾರರು ಸಲ್ಲಿಸಿದ ಅಪೀಲನ್ನು ವಜಾಗೊಳಿಸಿ, ವಿಮಾದಾರರು ಸಲ್ಲಿಸಿದ ಅಪೀಲನ್ನು ಪುರಸ್ಕರಿಸಲಾಗಿದೆ.

18. ಈ ಅಪೀಲುಗಳ ವಿಲೆಯ ದೃಷ್ಟಿಯಿಂದ, ಯಾವುವಾದರೂ ವಾದಕಾಲೀನ ಅರ್ಜಿಗಳು ಬಾಕಿ ಇದ್ದರೆ, ಪರಿಗಣನೆಗಾಗಿ ಅವುಗಳು ಉಳಿಯುವುದಿಲ್ಲ ಮತ್ತು ಅವು ವಿಲೆಯಾಗಿವೆಯೆಂದು ಭಾವಿತವಾಗುತ್ತವೆ.